ಮಕ್ಕಳ ಸ್ನೇಹಿ ಸಮಾಜಕ್ಕಾಗಿ

# ಶಿಕ್ಷಣ ಸಂಚಲನ

ಸಂಚಿಕೆ 1 ಪಡಿ – ಸುದ್ದಿಪತ್ರ ಖಾಸಗಿ ಪ್ರಸಾರಕ್ಕಾಗಿ ಮಾತ್ರ

**ಪ್ರಕಾಶಕರು :**
ರೆನ್ನಿ ಡಿ'ಸೋಜ

**ಪ್ರಕಟನೆ :**
ದಾಖಲಾತಿ ವಿಭಾಗ,
ಪಡಿ

**ಸಲಹೆ ಮತ್ತು ಸಹಕಾರ :**
ಪಡಿ ಬಳಗ ಮತ್ತು
ಶಿಕ್ಷಣ ಸಂಪನ್ಮೂಲ ಕೇಂದ್ರ

**ವಿಳಾಸ :**
ಗುಣಾತ್ಮಕ ಶಿಕ್ಷಣಕ್ಕಾಗಿ
ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ
ಪಡಿ, ಗಣೇಶ,
ಕೊಲಾಸೊ ಆಸ್ಪತ್ರೆಯ ಬಳಿ
2ನೇ ಅಡ್ಡ ರಸ್ತೆ, ಬೆಂದೂರುವೆಲ್,
ಮಂಗಳೂರು – 02.

www.padivalored.com

## ಸಂಪಾದಕೀಯ

ವೆಲೊರೆಡ್ (ಮೌಲ್ಯಯುತ ಶಿಕ್ಷಣ) ಯೋಜನೆಯು ಸುಮಾರು 20 ವರ್ಷಗಳಿಗಿಂತಲೂ ಹೆಚ್ಚು ಸಮಯ ಶಿಕ್ಷಣ ಕ್ಷೇತ್ರ ಮತ್ತು ಮಕ್ಕಳ ರಕ್ಷಣೆಗಾಗಿ ಸಮುದಾಯದ ಭಾಗವಹಿಸುವಿಕೆಯ ಮೂಲಕ ಶೈಕ್ಷಣಿಕ ಕ್ಷೇತ್ರದ ಅಮೂಲಾಗ್ರ ಬದಲಾವಣೆಗೆ ಸರಕಾರದ ವಿವಿಧ ಇಲಾಖೆ ಮತ್ತು ಸಮಾನ ಮನಸ್ಕ ಸಂಸ್ಥೆಗಳ ಸಹಕಾರ, ಸಹಭಾಗಿತ್ವದಲ್ಲಿ ಅನೇಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಇದರ ಸಾಕರಕ್ಕಾಗಿ 2004ರಲ್ಲಿ ಪಡಿ ಸಂಸ್ಥೆಯು ನೋಂದಾವಣೆಗೊಂಡು ಸಮಸಮಾಜದ ನಿರ್ಮಾಣ ಮಾಡುವಲ್ಲಿ ಶಿಕ್ಷಣದ ಮಹತ್ವವನ್ನು ಅರಿತು ಶಿಕ್ಷಣ ಕ್ಷೇತ್ರದಲ್ಲಿನ ಗುಣಾತ್ಮಕ ಬದಲಾವಣೆಯ ಮಹತ್ವವನ್ನು ಸಮುದಾಯಕ್ಕೆ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾ ಇದೆ. ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸಮುದಾಯ ಆಧಾರಿತ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಪಡಿ ಸಂಸ್ಥೆಯ ವೆಲೊರೆಡ್ ಯೋಜನೆಯ ಮೂಲಕ ಜಾಗೃತಿಗೊಳಿಸುವಲ್ಲಿ ಯಶಸ್ವಿಯಾಗಿದೆ.

ಪಡಿ ಸಂಸ್ಥೆಯ ಮುಂದುವರಿದ ಭಾಗವಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಕಳೆದ 2014ರಿಂದ ಹಲವು ಕಾರ್ಯಕ್ರಮಗಳನ್ನು ಮಕ್ಕಳ ಒಟ್ಟಾರೆ ಅಭಿವೃದ್ಧಿಗೆ ಹಮ್ಮಿಕೊಳ್ಳುತ್ತಾ ಬಂದಿದೆ. ಈ ಸಂದರ್ಭದಲ್ಲಿ ಜಿಲ್ಲಾಡಳಿತ, ಶಿಕ್ಷಣ ಇಲಾಖೆ, ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಮುದಾಯದ ಜೊತೆ ಸೇರಿ ಮಗು ಸ್ನೇಹಿ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಅನೇಕ ಸಮಾಲೋಚನೆ, ತರಬೇತಿ ಹಾಗೂ ಕಮ್ಮಟ ನಡೆಸುವುದರ ಫಲವಾಗಿ ಅವಿಭಾಜಿತ ದ.ಕ. ಜಿಲ್ಲೆಯಲ್ಲಿ ನಡೆದ ಕೆಲವು ಮುಖ್ಯಾಂಶಗಳನ್ನು ಶಿಕ್ಷಣ ಸಂಚಲನದ ಮೂಲಕ ತಮ್ಮ ಮುಂದೆ ಇಡುತ್ತಿದ್ದೇವೆ. ಈ ಅಂಶಗಳು ಯೋಜನೆಯ ಆಶಯಕ್ಕೆ ಪೂರಕವಾಗಿದ್ದು ಅಲ್ಲದೆ ಗ್ರಾಮ, ತಾಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಈ ಮಗು ಸ್ನೇಹಿ ಸಮಾಜ ಪರಿಕಲ್ಪನೆ ಪಸರಿಸಲಿ ಎಂದು ಹಾರೈಸುತ್ತೇವೆ.

ಈ ಅವಧಿಯಲ್ಲಿ ಈ ಒಂದು ಪ್ರಯತ್ನಕ್ಕೆ ಸಹಕರಿಸಿದ ಜಿಲ್ಲಾಡಳಿತ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಅಭಾರಿಯಾಗಿದ್ದೇವೆ. ದ.ಕ. ಮತ್ತು ಉಡುಪಿಯಲ್ಲಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಮಕ್ಕಳ ಸ್ನೇಹಿ ಸಮಾಜದ ಕನಸು ನನಸು ಮಾಡುವ ಕೆಲಸದಲ್ಲಿ ಕೈಜೋಡಿಸಿದ್ದು ನಿಜವಾಗಿಯೂ ನಮ್ಮೆಲ್ಲರಿಗೂ ಪ್ರೇರಣೆಯಾಗಿದೆ.

ನಮ್ಮೆಲ್ಲರನ್ನು ಜೊತೆಗೂಡಿಸಿ ಆರೋಗ್ಯಕರ ಚರ್ಚೆಗೆ ಅನುಕೂಲಕರವಾಗಲಿರುವ ಈ **ಶಿಕ್ಷಣ ಸಂಚಲನ**ಕ್ಕೆ ಸೂಕ್ತ ಸಲಹೆ ನೀಡಿ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇವೆ.

**ಮೌಲ್ಯಧಾರಿತ ಶಿಕ್ಷಣ ಯೋಜನೆಯ ಮುಂದಿನ ಹೆಜ್ಜೆಯೇ ಮಗು ಸ್ನೇಹಿ ಶಾಲೆ ಮತ್ತು ಮಗು ಸ್ನೇಹಿ ಪಂಚಾಯತ್:**

ಮಕ್ಕಳ–ಸ್ನೇಹಿ ಶಾಲೆ (ಸಿಎಫ್ಎಸ್) ಮಾದರಿಗಳು ಗುಣಮಟ್ಟದ ಶಿಕ್ಷಣ ಪರಿಕಲ್ಪನೆಯನ್ನು ಆಧರಿಸಿದೆ ಮತ್ತು ಮಗುವಿನ ಒಟ್ಟು ಅಗತ್ಯಗಳನ್ನು ಕೇಂದ್ರೀಕರಿಸಿದೆ ,ಮಕ್ಕಳ–ಸ್ನೇಹಿ ಶಾಲೆ ಎಂದರೆ ಪ್ರತಿ ಮಗುವಿನ ಕಲಿಕೆ ಪ್ರಕ್ರಿಯೆಯಲ್ಲಿ ಈಗಾಗಲೇ ಎಲ್ಲಾ ಮಕ್ಕಳ ಕಲ್ಯಾಣ, ಹಕ್ಕುಗಳು ಹಾಗೂ ಸ್ನೇಹಪರ ಪರಿಸರದ ಮೇಲೆ ಪರಿಣಾಮ ಬೀರುವ ನಿಟ್ಟಿನಲ್ಲಿ ರೂಪಿಸಲಾಗಿವೆ.

ಶಾಲೆಯಲ್ಲಿ ಮಕ್ಕಳ ಹಾಜರಾತಿಯನ್ನು ಹೆಚ್ಚಿಸಲು ಮತ್ತು ಶಾಲೆಗೆ ನಿರಂತರವಾಗಿ ಹಾಜರಾಗಲು ಎಸ್.ಡಿ.ಎಮ್.ಸಿ, ಪೋಷಕರ ಮತ್ತು ಪಂಚಾಯತು ಸಹಭಾಗಿತ್ವ ಹೆಚ್ಚಿಸಲು ಮಕ್ಕಳ ಹಕ್ಕುಗಳ ಕ್ಲಬ್ ಮತ್ತು ಮೀನಾ ಕ್ಲಬ್‌ಗಳ ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆ, ಮಕ್ಕಳಲ್ಲಿ ನಾಯಕತ್ವದ ಮತ್ತು ಪ್ರತಿಭೆಗಳ ಅನಾವರಣಕ್ಕೆ ಪ್ರೋತ್ಸಾಹ, ಶಿಕ್ಷೆ ರಹಿತ ಭೋದನೆಗೆ ಪ್ರೇರಣೆ, ಮಕ್ಕಳ ಹಕ್ಕುಗಳ ರಕ್ಷಣೆಯೊಂದಿಗೆ ಕಿರುಕುಳ, ದೌರ್ಜನ್ಯ ಮತ್ತು ತಾರತಮ್ಯ ಆಗದಂತೆ ನೋಡಿಕೊಳ್ಳುವುದು. ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾರ್ಯಯೋಜನೆಗಳುಮತ್ತು ಎಲ್ಲಾ ಮಕ್ಕಳ ಕಲಿಕಾ ಪ್ರಗತಿಗೆ ಸಹಕಾರ ಇತ್ಯಾದಿ ಅಂಶಗಳನ್ನೊಳಗೊಂಡ ಕಾರ್ಯಗಳಿಗೆ ಒಟ್ಟು ವ್ಯವಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ ಈ ನಿಟ್ಟಿನಲ್ಲಿ ಮಗು ಸ್ನೇಹಿ ಶಾಲಾ ಕಾರ್ಯಚಟಿವಟಿಕೆಗಳನ್ನು ಸರಕಾರದ ವಿವಿಧ ಇಲಾಖಾ ಸಹಕಾರದೊಂದಿಗೆ ನಿರ್ವಹಿಸಲು ಇಲಾಖಾ ಮಟ್ಟದಲ್ಲಿ ವಿವಿಧ ಸಮಾಲೋಚನಾ ಕಾರ್ಯಗಾರವನ್ನು ಜಿಲ್ಲೆ,ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಹಮ್ಮಿಕೊಳ್ಳುವುದು ಮತ್ತು ಶಾಲೆಗಳಲ್ಲಿ ಶಿಕ್ಷಕರಿಗೆ, ಎಸ್.ಡಿ.ಎಮ್.ಸಿ ಸದಸ್ಯರೊಂದಿಗೆ ಸಹ ಪರಿಕಲ್ಪನೆಯ ಬಗ್ಗೆ ಅರಿವು ಮೂಡಿಸುವುದಾಗಿದೆ.

ಇದಕ್ಕಾಗಿ ದ.ಕ ಜಿಲ್ಲೆಯ 5 ತಾಲೂಕಿನ 5 ಗ್ರಾಮಪಂಚಾಯತ್ ವ್ಯಾಪ್ತಿಯ 15 ಶಾಲೆಗಳು ಹಾಗೂ ಉಡುಪಿ ಜಿಲ್ಲೆಯ 3 ತಾಲೂಕುಗಳ 3 ಗ್ರಾಮ ಪಂಚಾಯತ್ 9 ಸರಕಾರಿ ಶಾಲೆಗಳಲ್ಲಿ ಈ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಸಾರ್ವಜನಿಕ ಶಿಕ್ಷಣ **ಇಲಾಖೆಯೊಂದಿಗೆ ದ.ಕ ಹಾಗೂ ಉಡುಪಿ ಜಿಲ್ಲಾ ಪಂಚಾಯತ್‌ನ ಸಹಕಾರ ಮತ್ತು ಸಹಭಾಗಿತ್ವದಲ್ಲಿ 1 ವರ್ಷದಿಂದ** ಕಾರ್ಯಚರಿಸುತಿದೆ.

**ಮಗು ಸ್ನೇಹಿ ಶಾಲೆ ಹಾಗೂ ಪಂಚಾಯತ್ ಈ ಎಲ್ಲಾ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಕಳೆದ 2014–2015ರ ಸಾಲಿನಲ್ಲಿ ಉಭಯ ಜಿಲ್ಲೆಯಲ್ಲಿ ನಡೆಸಲಾದ ಪ್ರಮುಖ ಕಾರ್ಯಕ್ರಮಗಳು :**

- ಜಿಲ್ಲಾ ಮಟ್ಟದಲ್ಲಿ ದ.ಕ ಮತ್ತು ಉಡುಪಿ ಜಿಲ್ಲಾ ಮಟ್ಟದ ಶಿಕ್ಷಣ ಇಲಾಖೆಯ ಸಹಕಾರದಲ್ಲಿ ಮಗು ಸ್ನೇಹಿ ಶಾಲೆ, ಪಂಚಾಯತ್ ಮತ್ತು ಶಿಕ್ಷಣ ಹಕ್ಕು ಕೋಶದ ಕುರಿತು ಸಮಾಲೋಚನಾ ಸಭೆಗಳು.
- ಉಭಯ ಜಿಲ್ಲೆಯ ಆಯ್ದ 8 ಪಂಚಾಯತ್ ಗಳಲ್ಲಿ ಮಗು ಸ್ನೇಹಿ ಪರಿಕಲ್ಪನೆಯ ಸಮಾಲೋಚನಾಸಭೆಗಳು.
- ಜಿಲ್ಲಾ ,ತಾಲೂಕು,ಗ್ರಾಮ ಪಂಚಾಯತ್ ಹಂತದಲ್ಲಿ ಮಕ್ಕಳ ಹಕ್ಕುಗಳ ವೇದಿಕೆ–ಸಮಾಲೋಚನಾ ಸಭೆಗಳು.
- ಶಾಲಾ ಹಂತದಲ್ಲಿ ಪೋಷಕರು ಮತ್ತು ಎಸ್.ಡಿ.ಎಮ್.ಸಿಯವರೊಂದಿಗೆ ಸಮಾಲೋಚನಾ ಸಭೆ.
- ಆರ್.ಟಿ.ಇ.ಕಾಯ್ದೆ ಯ (R.T.E Act) ಅನುಷ್ಠಾನಕ್ಕಾಗಿ ಶಿಕ್ಷಣ ಹಕ್ಕು ಕೋಶದ ದ.ಕ ಜಿಲ್ಲೆಯಲ್ಲಿ ನಡೆದ ಸಮಾಲೋಚನಾ ಸಭೆಗಳು.
- ಮಗು ಸ್ನೇಹಿ ಸಮಾಜಕ್ಕಾಗಿ ಸಮುಧಾರಿತ ಸಂಸ್ಥೆಯೊಂದಿಗೆ ವಿವಿಧ ತರಭೇತಿಗಳು ಮತ್ತು ಸಮಾಲೋಚನಾ ಸಭೆಗಳು.
- ಭೋಧನಾ ವಿಧಾನದಲ್ಲಿ ಸುಧಾರಣೆ: ಅಧ್ಯಯನಕ್ಕಾಗಿ ಸಮಾಲೋಚನಾ ಸಭೆಗಳು

**ಮಗು ಸ್ನೇಹಿ ಪಂಚಾಯತ್ ಪರಿಕಲ್ಪನೆಯನ್ನು ಪರಿಚಯಿಸುವಲ್ಲಿ ಜಿಲ್ಲಾ ಮಟ್ಟದ ಸಭೆ**

ದ.ಕ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ದ.ಕ ಮಂಗಳೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ತುಳಸಿ ಮದ್ದಿನೇನಿ ಇವರ ಸಮ್ಮುಖದಲ್ಲಿ ಹೆಚ್ ವಾಲ್ಟರ್ ಡಿ ಮೆಲ್ಲೊ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಇಲಾಖಾ ಅಧಿಕಾರಿಗಳು, ಕುಪ್ಪೆಪದವು, ನಾವೂರು, ಕಾವಳಪಡೂರು, ಕಾವಳ ಮುಡೂರು, ಉಬರಡ್ಕ ಮಿತ್ತೂರು, ಕಬಕ ಮತ್ತು ಉಜಿರೆ ಪಂಚಾಯತಿಯ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ದಿ



ಅಧಿಕಾರಿಗಳನ್ನೊಳಗೊಂಡ ಸಮಾಲೋಚನಾ ಸಭೆ ನಡೆಸಲಾಗಿ ಮಗು ಸ್ನೇಹಿ ಪರಿಕಲ್ಪನೆಯನ್ನು ಪರಿಚಯಿಸಲಾಯಿತು.

ಸಭೆಯ ನಿರ್ಣಯದಂತೆ ಈ ಪರಿಕಲ್ಪನೆಯನ್ನು ಮುಂದಿನ ದಿನಗಳಲ್ಲಿ ಆಯ್ದ ಪಂಚಾಯತಿಗಳಲ್ಲಿ ಅಳವಡಿಸುವ ಸಲುವಾಗಿ ತಳಮಟ್ಟದ ಅಭಿಪ್ರಾಯವನ್ನು ಪಡೆಯುವ ಸಲುವಾಗಿ ಪ್ರಾಥಮಿಕ ಹಂತದಲ್ಲಿ ಪಂಚಾಯತ್ಮಟ್ಟದ ಸಮಾಲೋಚನಾ ಸಭೆಯನ್ನು ನಡೆಸಿ,ಅಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜಿಲ್ಲಾ ಮಟ್ಟಕ್ಕೆ ಕಳುಹಿಸಿ ಮುಂದಿನ ದಿನಗಳಲ್ಲಿ ಈ ಪರಿಕಲ್ಪನೆಯ ಕಾರ್ಯಯೋಜನೆಗೆ ಪಡಿ ಮತ್ತು ಇಲಾಖಾ ಜೊತೆ ತಿಳುವಳಿಕಾ ಪತ್ರವನ್ನು ಮಾಡುವುದಾಗಿ ನಿರ್ಣಯಿಸಲಾಯಿತು.

ಉಡುಪಿ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ದಿವಾಕರ್ ಶೆಟ್ಟಿ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಮತ್ತು ಶಿಕ್ಷಣಾಧಿಕಾರಿ ಹಾಗೂ ತೆಂಕನಿಡಿಯೂರು, ಬೈಲೂರು ಮತ್ತು ತಲ್ಲೂರು ಪಂಚಾಯತ್ ಸದಸ್ಯರನ್ನೊಳಗೊಂಡ ಸಮಾಲೋಚನಾ ಸಭೆಯನ್ನು ನಡೆಸಲಾಗಿ, ಮಗು ಸ್ನೇಹಿ ಪರಿಕಲ್ಪನೆಯನ್ನು ಪರಿಚಯಿಸಲಾಯಿತು. ಹಾಗೂ ಈ ಪಂಚಾಯತ್ ಮಟ್ಟದಲ್ಲೂ ಸಮಾಲೋಚನಾ ಸಭೆಯನ್ನು ನಡೆಸಿ ಮುಂದಿನ ದಿನಗಳಲ್ಲಿ ಈ ಪರಿಕಲ್ಪನೆಯ ಕಾರ್ಯಯೋಜನೆಗೆ ಪಡಿ ಮತ್ತು ಇಲಾಖಾ ಜೊತೆ ತಿಳುವಳಿಕಾ ಪತ್ರವನ್ನು ಮಾಡುವುದಾಗಿ ನಿರ್ಣಯಿಸಲಾಯಿತು. ದ,ಕ ಜಿಲ್ಲೆಯ ಕಾವಳ ಮುಡೂರು, ಉಬರಡ್ಕ ಮಿತ್ತೂರು, ಕಬಕ ಮತ್ತು ಉಜಿರೆ ಮತ್ತು ಉಡುಪಿ ಜಿಲ್ಲೆಯ ತೆಂಕನಿಡಿಯೂರು, ಬೈಲೂರು ಮತ್ತು ತಲ್ಲೂರು ಪಂಚಾಯತ್‌ಗಳಲ್ಲಿ ಮಗುಸ್ನೇಹಿ ಶಾಲೆ ಮತ್ತು ಮಗು ಸ್ನೇಹಿ ಪಂಚಾಯತಿ ಪರಿಕಲ್ಪನೆಯನ್ನು ಪರಿಚಯಿಸುವಲ್ಲಿ ನಡೆದ ಸಮಾಲೋಚನಾ ಸಭೆಗಳು ನಡೆದಿರುತ್ತದೆ.

**ಈ ಸಭೆಯ ಪ್ರಮುಖ ನಿರ್ಣಯಗಳು :**

- ಶಾಲೆಯಲ್ಲಿ ಮಕ್ಕಳ ಹಾಜರಾತಿಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದು.
- ಮಕ್ಕಳ ಮೇಲೆ ಯಾವುದೇ ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸೆ, .ದೌರ್ಜನ್ಯ, ಕಿರುಕುಳ , ಹಾಗು ತಾರತಮ್ಯ ಆಗದಂತೆ ನೋಡಿಕೊಳ್ಳುವುದು.
- ಗ್ರಾಮ ಪಂಚಾಯತ್‌ಗಳು ತಮ್ಮ ಪಂಚಾಯತ್ ವ್ಯಾಪ್ತಿಯ ಶಾಲಾ ಚಟುವಟಿಕೆಗಳ (ಮೂಲಭೂತ ಸೌಕರ್ಯ ಹಾಗು ಮಕ್ಕಳ ಕಲಿಕಾ ಪ್ರಗತಿ ಪರಿಶೀಲನೆ) ನಿರಂತರ ಮೌಲ್ಯಮಾಪನ ನಡೆಸುವುದು. ಶಾಲೆಯಲ್ಲಿ ಮಕ್ಕಳ ಹಾಜರಾತಿಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದು.
- ಪಂಚಾಯತ್ ನೇತೃತ್ವದಲ್ಲಿ ಸಮುದಾಯದಲ್ಲಿ ಮಕ್ಕಳ ಸುರಕ್ಷೆ ಮತ್ತು ಮಕ್ಕಳ ಹಕ್ಕುಗಳು ಹಾಗು ರಕ್ಷಣೆಗಾಗಿ ಇರುವ ವಿವಿಧ ಕಾನೂನು ಮತ್ತು ಪ್ರಾಧಿಕಾರಗಳ ಕುರಿತು ಜನ ಜಾಗೃತಿ ಮೂಡಿಸುವುದು.
- ಗ್ರಾಮ ಪಂಚಾಯತ್ ನೇತೃತ್ವದಲ್ಲಿ ಪಂಚಾಯತ್ ವ್ಯಾಪ್ತಿಯ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವಲ್ಲಿ ಸಾಮುದಾಯಿಕ ಆಂದೋಲನವನ್ನು ಕೈಗೊಳ್ಳುವುದು. (ಪೋಷಕರ ಸಮಾವೇಶ. ಸಮುದಾಯ ಜಾಗೃತಿ ಕಾರ್ಯಕ್ರಮಗಳು ಇತ್ಯಾದಿ)
- ಶಾಲಾ ಚಟುವಟಿಕೆಗಳಲ್ಲಿ ಲಿಂಗಸಮಾನತೆಯಾಧಾರಿತ ಕಾರ್ಯಕ್ರಮಗಳ ಆಯೋಜನೆ ಹಮ್ಮಿಕೊಳ್ಳುವುದು
- ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನಕ್ಕೆ ಸಂಬಂದಿಸಿದಂತೆ ಕಾಯಿದೆಯ ಪರಿಪೂರ್ಣತೆಗಾಗಿ ಕಾರ್ಯತಂತ್ರಗಳ ಆಯೋಜನೆ ಹಾಗು ಎಸ್.ಡಿ.ಎಂ.ಸಿ ಹಾಗು ಸಮುದಾಯ ಸಬಲೀಕರಣ
- ಶಾಲಾ ಹಂತದಲ್ಲಿ ಮಕ್ಕಳಲ್ಲಿ ನಾಯಕತ್ವ ಬೆಳೆಸುವ ಹಾಗು ಎಲ್ಲಾ ಮಕ್ಕಳಿಗೆ ಸಮಾನವಾಗಿ ಭಾಗವಹಿಸುವ ಅವಕಾಶ ನಿರ್ಮಾಣ ಮಡುವಲ್ಲಿ ಕಾರ್ಯಕ್ರಮಗಳ ಆಯೋಜನೆ
- ಶಿಕ್ಷಣ ಇಲಾಖೆಯ ವಿವಿಧ ಸ್ತರಗಳ ಆಡಳಿತ ವ್ಯವಸ್ಥೆಗಳ ಮೂಲಕ ಮಕ್ಕಳ ಗುಣಾತ್ಮಕ ಶಿಕ್ಷಣದ ಮೌಲ್ಯಮಾಪನವನ್ನು ಕಾಲಕಾಲಕ್ಕೆ ನಡೆಸಿ ಎಲ್ಲಾ ಮಕ್ಕಳ ಕಲಿಕಾ ಪ್ರಗತಿಗೆ ಸಹಕರಿಸುವುದು.

ಈ ಮೇಲಿನ ಅಂಶಗಳ ಈಡೇರಿಕೆಗಾಗಿ ಪಂಚಾಯತ್ ಹಂತದಲ್ಲಿ ಎಲ ್ಲಾ ಸಹಭಾಗಿಗಳ ಸಹಭಾಗಿತ್ವ ಮತ್ತು ಸಹಯೋಗದೊಂದಿಗೆ ಸಮೀಕ್ಷೆಯನ್ನು ನಡೆಸುವುದು.

**<u>ಪಂಚಾಯತ್ ಹಂತದ ಸಮಾಲೋಚನಾ ಸಭೆಯ ಪ್ರಮುಖ ನಿರ್ಣಯಗಳು:</u>**

ದ.ಕ ಜಿಲ್ಲೆಯ ಆಯ್ದ 5 ಗ್ರಾಮ ಪಂಚಾಯತ್ ಗಳಾದ ಕಬಕ, ಉಜಿರೆ, ಕುಪ್ಪೆಪದವು,ಕಾವಳ ಪಡೂರು ಮತ್ತು ಉಬರಡ್ಕ ಮಿತ್ತೂರು ನಲ್ಲಿ ಮತ್ತು ಉಡುಪಿ ಜಿಲ್ಲೆಯ ತೆಂಕನಿಡಿಯೂರು ಬೈಲೂರು,ತಲ್ಲೂರು ಮಗು ಸ್ನೇಹಿ ಪರಿಕಲ್ಪನೆಯ ಕುರಿತು ಪಂಚಾಯತ್ ಹಂತದ ಸಮಾಲೋಚನಾ ಸಭೆಯನ್ನು ನಡೆಸಲಾಯಿತು

**ಸಭೆಯ ನಿರ್ಣಯಗಳು:**

- ಶಾಲೆಗಳಲ್ಲಿ ಎಸ್.ಡಿ.ಎಂಸಿಯೊಂದಿಗೆ ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ನಿರಂತರ



ಗೈರುಹಾಜರಾಗುತ್ತಿರುವ ಮಕ್ಕಳ ಬಗ್ಗೆ ನಿಗಾ ವಹಿಸಿ ಗ್ರಾಮ ಪಂಚಾಯತ್ ಸಹಕಾರದೊಂದಿಗೆ ಶಾಲೆಯಲ್ಲಿ ಮಕ್ಕಳು ನಿರಂತರವಾಗಿ ಇರುವಂತೆ ನೋಡಿಕೊಳ್ಳಬೇಕು.

- ಪಂಚಾಯತ್‌ನ ಸಾಮಾನ್ಯ ಸಭೆ ಹಾಗೂ ಎಸ್.ಡಿ.ಎಂಸಿ ಸಭೆಗಳಲ್ಲಿ ಶಾಲಾ ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸಿ, ಅನುಷ್ಠಾನಗೊಳಿಸಬೇಕು
- ಶಾಲಾ ಸಮುದಾಯದತ್ತ ಕಾರ್ಯಕ್ರಮದಲ್ಲಿ ಪೋಷಕರು ಮಾತ್ರವಲ್ಲದೆ ಪಂಚಾಯತ್ ಸದಸ್ಯರು ಸ್ಥಳೀಯ ಸಮುದಾಯದ ವಿವಿಧ ಸಂಘಟನೆಗಳೊಂದಿಗೆ ಶಾಲಾಭಿವೃದ್ಧಿ ಚಟುವಟಿಕೆಗಳ ಬಗ್ಗೆ ಹಾಗೂ ಮಕ್ಕಳ ಕಲಿಕಾ ಗುಣಮಟ್ಟದ ಬಗೆಗಿನ ವಿಚಾರದಲ್ಲಿ ಮುಖಾಮುಖಿ ಚರ್ಚೆ ನಡೆಸಬೇಕು.
- ಪ್ರತೀ ಗ್ರಾಮ ಪಂಚಾಯತ್‌ಗಳಲ್ಲಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಮಾಹಿತಿ ಲಭ್ಯವಿರಬೇಕು.
- ಮಕ್ಕಳಲ್ಲಿ ಮೌಲ್ಯ ಶಿಕ್ಷಣದ ಬಗೆಗಿನ ಅಭಿರುಚಿ ಹೆಚ್ಚಿಸಲು ಮಕ್ಕಳ ಪೋಷಕರಿಗೆ ವಿವಿಧ ಕಾರ್ಯಾಗಾರವನ್ನು ನಡೆಸಬೇಕು
- ಪಂಚಾಯತ್ ಮಟ್ಟದಲ್ಲಿ ಎಲ್ಲಾ ಮಕ್ಕಳು ಅಪೌಷ್ಟಿಕತೆಯಲ್ಲಿ ಬಳಲದಂತೆ ಸಮುದಾಯಕ್ಕೆ ಜಾಗೃತಿ ಮೂಡಿಸಬೇಕು.
- ಮಕ್ಕಳಲ್ಲಿ ಅಪರಾಧಿ ಮನೋಭಾವನೆ ಕಡಿಮೆಗೊಳಿಸಲು ಹಾಗೂ ಮಕ್ಕಳು ಒತ್ತಡದಿಂದ ಹೊರಬರಲು ಪ್ರತೀ ಶಾಲೆಯಲ್ಲಿ ಆಪ್ತ ಸಮಾಲೋಚಕರ ನೇಮಕವಾಗಬೇಕು.
- ವರ್ಷಕ್ಕೊಮ್ಮೆ ಪಂಚಾಯತ್ ಮಟ್ಟದಲ್ಲಿ ಪೋಷಕರ ಸಮಾವೇಶವನ್ನು ನಡೆಸಿ, ಸಮುದಾಯದ ಭಾಗವಹಿಸುವಿಕೆಯನ್ನು ಸದೃಢಗೊಳಿಸಬೇಕು.
- ಎಸ್.ಡಿ.ಎಂಸಿಯು ತನ್ನ ಶಾಲಾ ವಾಸ್ತವತೆಯ ಕುರಿತು ಸಂಕ್ಷಿಪ್ತ ಸಮೀಕ್ಷೆ ನಡೆಸಿ, ಆ ಸಮೀಕ್ಷೆಯ ಆಧಾರದ ಮೇಲೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಬೇಕು.
- ಗ್ರಾಮ ಪಂಚಾಯತ್ ಮಟ್ಟದಲ್ಲಿ ಲಭ್ಯತೆಯಿರುವ ಮಾನವ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯು ಶಾಲಾ ಪಠ್ಯೇತರ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಲಭ್ಯವಾಗುವಂತಿರಬೇಕು.
- ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಸರಕಾರದಿಂದ ಲಭ್ಯತೆಯಿರುವ ಎಲ್ಲಾ ಸವಲತ್ತುಗಳ ಬಗೆಗಿನ ಅರಿವನ್ನು ಸಮುದಾಯದಲ್ಲಿ ಮೂಡಿಸಬೇಕು.
- ಮಕ್ಕಳ ಮೇಲೆ ಯಾವುದೇ ಲೈಂಗಿಕ ದೌರ್ಜನ್ಯ ಹಾಗೂ ಹಕ್ಕುಗಳ ಉಲ್ಲಂಘನೆಯಾಗದಂತೆ ಸಾಮುದಾಯಿಕ ಜಾಗೃತಿ ಮೂಡಿಸಬೇಕು.
- ಪಂಚಾಯತ್ ಮಟ್ಟದಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ನಿಗಾ ಸಮಿತಿಯನ್ನು ರಚಿಸಿ. ಅದರ ಮೂಲಕ ಎಲ್ಲಾ ಮಕ್ಕಳಿಗೆ ಸಮಾನತೆಯ ಬದುಕು ಲಭ್ಯತೆಯಾಗುವಂತೆ ನೋಡಿಕೊಳ್ಳಬೇಕು.
- ಗ್ರಾಮದಲ್ಲಿನ ಎಲ್ಲಾ ಮಕ್ಕಳೂ ಸರಕಾರಿ ಪ್ರಾಥಮಿಕ ಶಾಲೆಯ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಅಂಗನವಾಡಿಗಳ ಗುಣಮಟ್ಟವನ್ನು ಹೆಚ್ಚಿಸಿ ಬಲಗೊಳಿಸುವುದು.
- ಎಲ್ಲಾ ಮಕ್ಕಳಲ್ಲಿ ವೈಯುಕ್ತಿಕ ಆರೋಗ್ಯ, ಹಾಗೂ ಹದಿಹರೆಯದ ಅರಿವು ಮತ್ತು ಜಾಗೃತಿ ಮೂಡಿಸಿ ಆರೋಗ್ಯಪೂರ್ಣ ಸಮಾಜದ ಪ್ರಜೆಗಳಾಗುವಂತೆ ಮಾಡುವುದು.
- ಮಗು ಸ್ನೇಹಿ ಶಾಲೆ ಮತ್ತು ಪಂಚಾಯತ್ ಕಾರ್ಯಕ್ರಮದ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಸಹಭಾಗಿತ್ವ ಮತ್ತು ಸಹಕಾರವನ್ನು ಪಡೆಯುವುದು. ಈ ಸಮಾಲೋಚನಾ ಸಭೆಯಲ್ಲಿ ಪಂಚಾಯತ್ ಸದಸ್ಯರು,ಪಂಚಾಯತ್ ಅಭಿವೃದ್ಧಿ ಆಧಿಕಾರಿಗಳು ,ಪಡಿ ಸಂಸ್ಥೆಯ ಕಾರ್ಯಕರ್ತರು,ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು ಭಾಗವಹಿಸಿದ್ದರು

**ಮಕ್ಕಳ ಹಕ್ಕುಗಳ ವೇದಿಕೆ – ಸಮಾಲೋಚನಾ ಸಭೆ**

ದ.ಕ ಜಿಲ್ಲೆಯ ಆಯ್ದ 15 ಶಾಲೆಗಳು ಹಾಗೂ ಉಡುಪಿ ಜಿಲ್ಲೆಯ 9 ಶಾಲೆಗಳಲ್ಲಿ ಮೀನಾ ಕ್ಲಬ್,ಮಕ್ಕಳ ಹಕ್ಕುಗಳ ಕ್ಲಬ್ ನ ಸದಸ್ಯರ ಸಮಾಲೋಚನಾ ಸಭೆಯನ್ನು ನಡೆಸಿ ಶಾಲೆ,ಗ್ರಾಮ ಪಂಚಾಯತ್ ಹಾಗೂ ಜಿಲ್ಲಾ ಮಟ್ಟದಲ್ಲಿ ಮಕ್ಕಳ ವೇದಿಕೆಯನ್ನು ರಚಿಸಲಾಯಿತು.

**ಮಕ್ಕಳ ಪ್ರಮುಖ ಬೇಡಿಕೆಗಳು**

- ಶಾಲೆಗಳಲ್ಲಿ ಮಕ್ಕಳಿಗೆ ಪ್ರತ್ಯೇಕ ಊಟದ ಕೊಠಡಿ ಹಾಗೂ ಊಟದಲ್ಲಿ ವೈವಿದ್ಯತೆ, ಪೌಷ್ಟಿಕ ಆಹಾರ, ಶುದ್ಧ ಕುಡಿಯುವ ನೀರು ಇರಬೇಕು.

—ಪ್ರತಿ ಶಾಲೆಗಳಲ್ಲಿ ದೈಹಿಕ / ಕಲಾ /ವಿಷಯವಾರು ಶಿಕ್ಷಕರು ಕಡ್ಡಾಯವಾಗಿ ಇರಬೇಕು.

—ಮಕ್ಕಳ ಹಕ್ಕುಗಳ ಪ್ರಕಾರ ಎಲ್ಲಾ ಶಾಲೆಗಳಲ್ಲಿ ದೂರು ಪೆಟ್ಟಿಗೆ /ಸಲಹಾ ಪೆಟ್ಟಿಗೆ ಇರಬೇಕು.

—ಪ್ರತಿ ವರ್ಷವೂ ಮಕ್ಕಳಿಗೆ ಸರಿಯಾದ ಸಮಯಕ್ಕೆ ಸರ್ವಶಿಕ್ಷಣ ಅಭಿಯಾನದ ಮೂಲಕ ನಿಗಧಿತ ಸಮಯದಲ್ಲಿ ಅವರ ಅಳತೆಗನುಗುಣವಾಗಿ ಸಮವಸ್ತ್ರ /ಗುಣಮಟ್ಟದ ಸೈಕಲ್/ಶಾಲೆಗಳಿಗೆ ಕಂಪ್ಯೂಟರ್ ವಿತರಣೆಯಾಗಬೇಕು.

—5, 6. 7ನೇ ತರಗತಿಯ ಹುಡುಗಿಯರಿಗೆ ಸ್ಕರ್ಟ್‌ನ ಬದಲಿಗೆ ಚೂಡಿದಾರ್, ಹುಡುಗರಿಗೆ ಚಡ್ಡಿಯ ಬದಲು ಪ್ಯಾಂಟ್‌ನ ವ್ಯವಸ್ಥೆಯಾಗಬೇಕು.

—ಶಾಲಾ ಆವರಣದಿಂದ 100 ಮೀ ವ್ಯಾಪ್ತಿಯಲ್ಲಿ ಯಾವುದೇ ಮದ್ಯದ ಅಂಗಡಿ, ಗುಟ್ಕ ಮಾರಾಟ ಮಾಡದಂತೆ ನಿಷೇದ ಮಾಡಬೇಕು.

—ಶಾಲೆಗಳಲ್ಲಿ ಮಕ್ಕಳ ಪ್ರಗತಿ ಪತ್ರವನ್ನು ಸರಿಯಾದ ಸಮಯಕ್ಕೆ ನೀಡುವಂತಿರಬೇಕು.

—ಪಠ್ಯ ಪುಸ್ತಕಗಳು ಎಲ್ಲಾ ಸಮಯಗಳಲ್ಲೂ ಸಿಗಬೇಕು.

—ಎಲ್ಲಾ ಶಾಲೆಗಳಲ್ಲಿ ರಂಗಮಂದಿರ/ ಗ್ರಂಥಾಲಯ/ಪ್ರಯೋಗಾಲಯ/ಕ್ರೀಡಾ ಸಾಮಾಗ್ರಿ/ ಗಣಕಯಂತ್ರದ ವ್ಯವಸ್ಥೆ ಸರಿಯಾಗಿ ಇರಬೇಕು.

—ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ನಿರಾಕರಿಸಿದಲ್ಲಿ /ಹಾಗೂ ಪೋಷಕರ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಅವರ ಮೇಲೆ ಕ್ರಮ ಕೈಗೊಳ್ಳುವುದು.

—ಮಕ್ಕಳಿಗೆ ಶಾಲೆಗೆ ಬರಲು ಸರಿಯಾದ ರಸ್ತೆ ಹಾಗೂ ವಾಹನದ ವ್ಯವಸ್ಥೆ /ಸರ್ಕಾರಿ – ಖಾಸಗಿ ಬಸ್ಸು ಗಳಲ್ಲಿ ಮಕ್ಕಳಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಇರಬೇಕು.

—ಬೀದಿ ನಾಯಿಗಳ ತೊಂದರೆಯಿಂದ ಮಕ್ಕಳಿಗೆ ರಕ್ಷಣೆ ಬೇಕು.

—ಶಾಲೆಗಳಲ್ಲಿ ನೀರು , ಪೀಠೋಪಕರಣ, ಶೌಚಲಯ, ತಡೆಗೋಡೆಯ ವ್ಯವಸ್ಥೆ ಸರಿಯಾಗಿರಬೇಕು.

—ಪುಸ್ತಕದ ಹೊರೆ ಕಡಿಮೆ ಮಾಡಲು ಸೆಮಿಸ್ಟರ್ ಗಳಿಗನುಗುಣವಾಗಿ ಪಠ್ಯ ಪುಸ್ತಕದ ರಚನೆಯಾಗಬೇಕು.

—ಮಕ್ಕಳಿಗೆ ಸರಿಯಾದ ಸಮಯಕ್ಕೆ ವಿದ್ಯಾರ್ಥಿವೇತನ ಸಿಗಬೇಕು.

—ಮಕ್ಕಳಿಗೆ ಯಾವುದೇ ರೀತಿಯಲ್ಲಿ ಸಮಸ್ಯೆಯಾದಾಗ ಸಾರ್ವಜನಿಕರು ಮತ್ತು ಇಲಾಖೆ ತಕ್ಷಣ ಸ್ಪಂದಿಸಬೇಕು.

—ನಲಿಕಲಿ ಮಕ್ಕಳಿಗೆ ಮಳೆಗಾಲದಲ್ಲಿ ನೆಲದಲ್ಲಿ ಕುಳಿತು ಕೊಳ್ಳುವುದರಿಂದ ತೊಂದರೆಯಾಗುವುದನ್ನು ತಪ್ಪಿಸಬೇಕು.

— ಪ್ರತಿ ತಾಲೂಕಿನಲ್ಲಿ ವಿಶೇಷ ಅಗತ್ಯತೆ ಇರುವ ಮಕ್ಕಳ ಶಾಲೆಗಳನ್ನು ತೆರೆಯುವುದು



— ಪ್ರತಿ ಶಾಲೆಗಳಲ್ಲಿ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಡ್ಡಾಯವಾಗಿ ಇರಬೇಕು.

—ಯಾವುದೇ ತಾರತಮ್ಯವಿಲ್ಲದೇ ಎಲ್ಲಾ ಧರ್ಮದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

—ಶಾಲೆಗಳ ಬದಿಯಲ್ಲಿ ಸೂಚನಾ ಫಲಕವನ್ನು ಅಳವಡಿಸಬೇಕು.

—ಮಕ್ಕಳ ಗ್ರಾಮ ಸಭೆಯಲ್ಲಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಮುಕ್ತ ಅವಕಾಶ ಸಿಗಬೇಕು.

—ಶಾಲೆಯ ಹತ್ತಿರದಲ್ಲಿ ಆಸ್ಪತ್ರೆ ಹಾಗೂ ಆರೋಗ್ಯ ಸಹಾಯಕಿಯರು ಶಾಲೆಗೆ ಹೆಚ್ಚು ಸಾರಿ ಬೇಟಿ ನೀಡಬೇಕು.

—ಮಕ್ಕಳ ಪ್ರತಿಭೆಗೆ ತಕ್ಕಂತೆ ಅವಕಾಶ ಸಿಗಬೇಕು.

—ಮಕ್ಕಳ ಮೇಲೆ ದೌರ್ಜನ್ಯ ದೈಹಿಕ,ಮಾನಸಿಕ ಹಿಂಸೆಯಾಗದಂತೆ ಕ್ರಮ ಕೈಗೊಳ್ಳುವುದು.

- ಮಕ್ಕಳಿಗೆ ಕೆಲಸಕ್ಕೆ ಕಳುಹಿಸದೇ ಕಡ್ಡಾಯವಾಗಿ ಶಿಕ್ಷಣ ನೀಡುವಂತೆ ವ್ಯವಸ್ಥೆ ಮಾಡುವುದು.
- ಹದಿಹರೆಯದ ಶಿಕ್ಷಣ ಕಡ್ಡಾಯವಾಗಿ ಮಕ್ಕಳಿಗೆ ಸಿಗಬೇಕು.

**ಶಾಲಾ ಹಂತದಲ್ಲಿ ಪೋಷಕರೊಂದಿಗೆ ಹಾಗೂ ಎಸ್.ಡಿ.ಎಂ.ಸಿ. ಸಮಾಲೋಚನಾ ಸಭೆ:**

ಶಾಲಾ ಚಟುವಟಿಕೆಗಳಲ್ಲಿ ಸಮುದಾಯದ ಭಾಗವಹಿಸುವಿಕೆಯು ಅರ್ಥಪೂರ್ಣಗೊಳಿಸಬೇಕಾದರೆ ಪೋಷಕರ ಮತ್ತು ಎಸ್.ಡಿ.ಎಂಸಿಯ ಭಾಘವಹಿಸುವಿಕೆ ಅತೀ ಅಗತ್ಯ. ಈ ನಿಟ್ಟಿನಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಆರೋಗ್ಯಪೂರ್ಣ ಮತ್ತು ರಚನಾತ್ಮಕವಾಗಿ ಅನುಯಷ್ಟಾನಗೊಳಿಸುವ ಉದ್ದೇಶದಿಂದ ಮಗುಸ್ನೇಹಿ ಶಾಲೆಯ ಪರಿಕಲ್ಪನೆಯ ವಿವಿಧ ಆಯಾಮಗಳ ಕುರಿತು ದ.ಕ. ಜಿಲ್ಲೆಯ ಆಯ್ದ ಸರಕಾರಿ ಶಾಲೆಗಳಲ್ಲಿ ಸಮಾಲೋಚನಾ ಸಭೆಯನ್ನು ನಡೆಸಲಾಯಿತು.

**ಸಭೆಯಲ್ಲಿ ಚರ್ಚಿಸಿ, ನಿರ್ಧರಿಸಲಾದ ಪ್ರಮುಖ ಅಂಶಗಳು :**

- ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವುದು.
- ಶಾಲೆಯಲ್ಲಿ ಮಕ್ಕಳ ನಿರಂತರ ಗೈರು ಹಾಜರಿಯನ್ನು ಕಾಪಾಡುವುದು.

- ಮಕ್ಕಳ ಮೇಲೆ ಯಾವುದೇ ರೀತಿಯ ದೈಹಿಕ, ಮಾನಸಿಕ ಮತ್ತು ಲೈಂಗಿಕ ದೌರ್ಜನ್ಯ ನಡೆಯದಂತೆ ನೋಡಿಕೊಳ್ಳುವುದು.
- ಎಲ್ಲ ಮಕ್ಕಳಿಗೂ ಸಮಾನವಾದ ಭಾಗವಹಿಸುವಿಕೆಯ ಅವಕಾಶವನ್ನು ಕಲ್ಪಿಸುವುದು
- ಮಕ್ಕಳ ಮೇಲೆ ಯಾವುದೇ ರೀತಿಯ ತಾರತಮ್ಯ ನಡೆಯದಂತೆ ನೋಡಿಕೊಳ್ಳುವುದು
- ಮಕ್ಕಳಲ್ಲಿ ನಾಯಕತ್ವ ಬೆಳೆಸುವಲ್ಲಿ ಶಿಕ್ಷಕರೊಂದಿಗೆ ಪೋಷಕರು ಕೈ ಜೋಡಿಸುವುದು.
- ಶಾಲಾ ಹಂತದಲ್ಲಿರುವ ವಿವಿಧ ವೇದಿಕೆಗಳ ಮೂಲಕ ಪಠ್ಯೇತರ ಚಟುವಟಿಕೆಗಳನ್ನು ನಡೆಸಿ, ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೆ ಸಹಕರಿಸುವುದು

**ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಕೋಶ:**

ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವಂತೆ ಭಾರತದ ಸಂವಿಧಾನವು ದೇಶದ ಸರಕಾರಕ್ಕೆ ಜವಾಬ್ದಾರರನ್ನಾಗಿಸಿದೆ, 2009ರಲ್ಲಿ ಜಾರಿಯಾದ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಹಕ್ಕು ಕಾಯಿದೆಯೂ ಕೂಡಾ ಪರಿಪೂರ್ಣವಾಗಿ ತಳಮಟ್ಟದಲ್ಲಿ ಅನುಷ್ಠಾನಗೊಳ್ಳಬೇಕಾದರೆ ಸಮುದಾಯದ ಭಾಗವಹಿಸುವಿಕೆ ಬಹಳ ಅಗತ್ಯ. ಈ ಉದ್ದೇಶಗಳ ಈಡೇರಿಕೆಯ ಪ್ರಾಥಮಿಕ ಹಂತವಾಗಿ ಜಿಲ್ಲಾ ಮಟ್ಟದಲ್ಲಿ ಮಾನ್ಯ ಉಪನಿರ್ದೇಶಕರ ನೇತೃತ್ವದಲ್ಲಿ ಸಮಾಲೋಚನಾ ಸಭೆನಡೆದಿದ್ದು ಮುಂದಿನ ಹಂತವಾಗಿ ಜಿಲ್ಲೆಯ 5 ತಾಲೂಕುಗಳಲ್ಲಿ ವಲಯ ಮಟ್ಟದಲ್ಲಿ ಆಯಾಯ ವಲಯ ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಶಿಕ್ಷಣ ಹಕ್ಕು ಕೋಶದ ಕುರಿತು ಸಮಾಲೋಚನಾ ಸಭೆ ನಡೆಯಿತು ಈ ಸಭೆಯಲ್ಲಿ ಈ ಕ್ಷೇತ್ರ ಶಿಕ್ಷಣಾಧಿಕಾರಿಗಳು,ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಸಮೂಹ ಸಂಪನ್ಮೂಲ ವ್ಯಕ್ತಿ ಹಾಗೂ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು ಪಡಿ ಸಂಸ್ಥೆಯ ಪ್ರತಿನಿಧಿಗಳು ಭಾಗವಹಿಸುವುದು ಮತ್ತು ಮಕ್ಕಳ ಶಿಕ್ಷಣ ಹಕ್ಕುಕೋಶ ದ ಮುಂದಿನ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಲಾಯಿತು.



**ಮಗು ಸ್ನೇಹಿ ಸಮಾಜಕ್ಕಾಗಿ ಸಮುಧಾಯಧಾರಿತ ಸಂಸ್ಥೆಯ ಬೆಂಬಲಕ್ಕಾಗಿ ವಿವಿಧ ಚಟುವಟಿಕೆಗಳು ಪ್ರಮುಖ ನಿರ್ಣಯಗಳು:**



ಮೌಲ್ಯಧಾರಿತ ಶಿಕ್ಷಣ ಪರಿಕಲ್ಪನೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಕಾರ್ಯಚರಿಸುತ್ತಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಹಲವಾರು ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಶಿಕ್ಷಕರು,ಪೋಷಕರು,ಮತ್ತು ಎಸ್.ಡಿ.ಎಂ.ಸಿ.ಗಳ ಸಹಭಾಗಿತ್ವದಲ್ಲಿ ನಡೆಸುತ್ತಾ ಬಂದಿರುತ್ತಾರೆ.ಈ ಸಂಪನ್ಮೂಲ ಕೇಂದ್ರ ಸಬಲೀಕರಣಕ್ಕಾಗಿ ಹಲವಾರು ಕಾರ್ಯಕ್ರಮಗಳ ಪಡಿ ಸಂಸ್ಥೆಯ ಮೂಲಕ ನಡೆಸಲಾಗಿರುತ್ತದೆ.

- ಶಿಕ್ಷಣ ಸಂಪನ್ಮೂಲ ಕೇಂದ್ರದ ಆಡಳಿತಾತ್ಮಕ ಸಬಲೀಕರಣ
- ಪ್ರಸ್ತುತ ಶಿಕ್ಷಣ ವ್ಯವಸ್ಥೆ ಮತ್ತು ಗುಣಾತ್ಮಕ ಶಿಕ್ಷಣ (ಮಗು ಸ್ನೇಹಿ ಶಾಲೆ) ದಲ್ಲಿ ಸಮುದಾಯದ ಭಾಗವಹಿಸುವಿಕೆ
- ಮಗು ಸ್ನೇಹಿ ಪಂಚಾಯತ್ ಪರಿಕಲ್ಪನೆಯಲ್ಲಿ ಸಮುಧಾಯದ ಬಾಗವಹಿಸುವಿಕೆ
- ಮಕ್ಕಳ ಹಕ್ಕುಗಳ ಕೋಶ ಕ್ಕಾಗಿ ಕೊಡುಗೆ
- ಶೈಕ್ಷಣಿಕ ಜಾಗೃತಿಗಾಗಿ ಸಮುದಾಯದ ಕೊಡುಗೆ

ಇತ್ಯಾದಿಗಳ ಬಗ್ಗೆ ತರಬೇತಿ ನಡೆಸಲಾಗಿದ್ದು ಈ ತರಬೇತಿಯಲ್ಲಿ 60 ಕಾರ್ಯಕಾರಿ ಸಮಿತಿ ಸದಸ್ಯರು ಈ ಪ್ರಯೋಜನವನ್ನು ಪಡೆದಿರುತ್ತಾರೆ

**ತರಬೇತುದಾರರ ತರಬೇತಿ :**

ಸಂಪನ್ಮೂಲ ವ್ಯಕ್ತಿಗಳನ್ನು ವಿವಿಧ ವಿಷಯಗಳಲ್ಲಿ ತರಬೇತಿಗೊಳಿಸಿ ಸಂಪನ್ಮೂಲ ವ್ಯಕ್ತಿಗಳ ತಂಡವನ್ನು ರಚಿಸಿ ಈ ಸಂಪನ್ಮೂಲ ತಂಡದ ಮೂಲಕ ಸಮುದಾಯಕ್ಕೆ ಮಾಹಿತಿ ನೀಡಿ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಜೊತೆಗೆ ತಳಮಟ್ಟದ ಸಮಸ್ಯೆಗಳನ್ನು ಸಂಬಂಧಪಟ್ಟ ಪ್ರಾಧಿಕಾರದ ಗಮನಕ್ಕೆ ತಂದು ಸಮಸ್ಯೆಗಳಿಗೆ ಪರಿಹರಿಸುವಲ್ಲಿ ಮಾರ್ಗದರ್ಶನ ನೀಡುವ ಹಾಗೂ ರಾಜ್ಯಮಟ್ಟದ ತರಬೇತಿದಾರರನ್ನಾಗಿ ರೂಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ತಂಡಕ್ಕೆ ತಜ್ಞರ ಸಲಹೆ ಸೂಚನೆಗಳ ಮೇರೆಗೆ

ರಚಿಸಿದ ಕೈಪಿಡಿಯ ಆಧಾರದ ಮೇಲೆ ತರಬೇತಿಯನ್ನು ನೀಡಿದೆ.ಅವುಗಳಲ್ಲಿ ಮುಖ್ಯವಾಗಿ:–

v **ಲಿಂಗತ್ವ ಪರಿಕಲ್ಪನೆ**
ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ (ಜಿಲ್ಲಾವಾರು) ಸುಮಾರು 32 ಸಂಪನ್ಮೂಲ ವ್ಯಕ್ತಿಗಳಿಗೆ ಲಿಂಗತ್ವ ಪರಿಕಲ್ಪನೆಯ ಬಗ್ಗೆ ತರಬೇತಿಯನ್ನು ಸಾಹಿತ್ಯದೊಂದಿಗೆ ನೀಡುವುದರ ಜೊತೆಗೆ ಕ್ರಿಯಾಯೋಜನೆಯನ್ನು ರಚಿಸಿ ಮುಂದಿನ ಅನುಸರಣಾ ದಾಖಲಾತಿ ಪ್ರಕ್ರಿಯೆ ನಡೆಯುತ್ತಿದೆ.

v **ಪೋಕ್ಸೋ ಕಾಯಿದೆ 2012**
ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ (ಜಿಲ್ಲಾವಾರು) ಸುಮಾರು 40 ಸಂಪನ್ಮೂಲ ವ್ಯಕ್ತಿಗಳಿಗೆ ಲಿಂಗತ್ವದ ಬಗ್ಗೆ ತರಬೇತಿಯನ್ನು ಸಾಹಿತ್ಯದೊಂದಿಗೆ ನೀಡುವುದರ ಜೊತೆಗೆ ಕ್ರಿಯಾಯೋಜನೆಯನ್ನು ರಚಿಸಿ ಮುಂದಿನ ಅನುಸರಣೆಗಾಗಿ ದಾಖಲಾತಿ ಪ್ರಕ್ರಿಯೆ ನಡೆಯುತ್ತಿದೆ.

v **ಶಿಕ್ಷಣ ಸಂಪನ್ಮೂಲ ಕೇಂದ್ರದ ಕಾರ್ಯಕ್ರಮ ವಿಸ್ತಾರತೆಗಾಗಿ:**
ಶಿಕ್ಷಣ ಸಂಪನ್ಮೂಲ ಕೇಂದ್ರದ ಪರಿಕಲ್ಪನೆಯನ್ನು/ ಸಿದ್ಧಾಂತವನ್ನು ತಳಮಟ್ಟಕ್ಕೆ/ ಗ್ರಾಮ ಮಟ್ಟಕ್ಕೆ ಕೊಂಡೊಯ್ಯುವುದರ ಜೊತೆಗೆ ಸಾಮುಧಾಯಿಕ ಆಂದೋಲನಾವನ್ನು ಹಮ್ಮಿಕೊಂಡು ಶಿಕ್ಷಣ ಜಾಗೃತಿ ಹೆಚ್ಚಿಸುವುದು. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 41 ಪೆಲೊಶಿಪ್ ಕಾರ್ಯಕ್ರಮವನ್ನು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು ಗ್ರಾಮ ಮಟ್ಟದಲ್ಲಿ ವಿವಿಧ ವಿಷಯಗಳ ಬಗ್ಗೆ ತರಬೇತಿ ಯೊಂದಿಗೆ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಿದ್ಧಾಂತವನ್ನು ವಿಸ್ತರಿಸಲು ಸಹಕಾರಿಯಾಗಿದೆ.ಸಂಪನ್ಮೂಲ ತಂಡದ ಮೂಲಕ ತಳಮಟ್ಟದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಬಗ್ಗೆ ಅರಿವು ನೀಡುವುದರ ಜೊತೆ ಶಿಕ್ಷಣ ಕ್ಷೇತ್ರದಲ್ಲಿ ಕಾಳಜಿ ಇರುವ ಬೇರೆ ಬೇರೆ ಸ್ತರದ ಸದಸ್ಯರನ್ನು ಸಂಪನ್ಮೂಲ ಕೇಂದ್ರಕ್ಕೆ ಸದಸ್ಯರನ್ನಾಗಿ ಮಾಡುವಲ್ಲಿ ಪ್ರೇರೆಪಿಸುವುದು.

**ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರ ಸಹಭಾಗಿತ್ವದೊಂದಿಗೆ ನಡೆಸಲಾದ ಇತರ ಕಾರ್ಯಕ್ರಮಗಳು :**

- ರಾಜ್ಯ ಮಟ್ಟದ ಮಕ್ಕಳ ಸಂಸತ್ ಕಾರ್ಯಕ್ರಮದನ್ವಯ ದ.ಕ ಮತ್ತು ಉಡುಪಿ ಜಿಲ್ಲೆಯ ಶಾಸಕರೊಂದಿಗೆ ಮಕ್ಕಳ ಸಂವಾದ
- ಬಾಲ ವಿಕಾಸ ಅಕಾಡೆಮಿಯೊಂದಿಗೆ ಶೈಕ್ಷಣಿಕ ಜಾಗೃತಿಗಾಗಿ ಸಮುದಾಯ ಅರಿವು ಕಾರ್ಯಕ್ರಮ
- ಶೈಕ್ಷಣಿಕ ಕ್ಷೇತ್ರದಲ್ಲಿ ಗುಣಾತ್ಮಕ ಶಿಕ್ಷಣದ ಅನುಷ್ಠಾನಕ್ಕಾಗಿ ಶಿಕ್ಷಣಕದಕ್ಕಿರುವ ಸವಾಲುಗಳು ,ಸಮಸ್ಯೆಗಳು ಕುರುತು ಶಿಕ್ಷಣ ಶಿಕ್ಷಕ ಸಪ್ತಾಹ
- ಅಸರ್ ಪೌಂಡೆಷನ್ ದೆಹಲಿ ಇವರ ಸಹಭಾಗಿತ್ವದಲ್ಲಿ ಮಕ್ಕಳ ಕಲಿಕಾ ಸಾಮಾರ್ಥ್ಯ ಕುರಿತು ಸಮೀಕ್ಷೆ
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ ಹಾಗೂ ಲಿಂಗತ್ವ ಪರಿಕಲ್ಪನೆ ಕುರಿತು ಪಂಚಾಯತ್ ಮಾಹಿತಿ ಕಾರ್ಯಕ್ರಮಗಳು

**ಭೋಧನಾ ವಿಧಾನದಲ್ಲಿ ಸುಧಾರಣೆ:**

ಶಿಕ್ಷಣದಲ್ಲಿ ಬದಲಾವಣೆ ಅನಿವಾರ್ಯ ಅದು ಮೌಲ್ಯಯುತವಾಗಿರಬೇಕು ಮತ್ತು ಬದಲಾಗುತ್ತಿರುವ ಸನ್ನಿವೇಶಕ್ಕೆ ತಕ್ಕಂತೆ ಭೋದನಾ ವಿಧಾನದಲ್ಲಿ ಬದಲಾವಣೆಯು ಗುಣಾತ್ಮಕವಾಗಿರಬೇಕು ಎಂಬ ಆಶಯದೊಂದಿಗೆ ಭೋದನಾ




ವಿಧಾನವನ್ನು ಆದ್ಯಯನ ಮಾಡುವುದರೊಂದಿಗೆ ವಾಸ್ತವ ಸ್ಥಿತಿಯನ್ನು ತಿಳಿಯುವ ಉದ್ದೇಶದೊಂದಿಗೆ ಶಿಕ್ಷಣ ಸಿದ್ಧಾಂತಿಗಳ ಮಾರ್ಗದರ್ಶನದಿಂದ ನಡೆಸಲು ಉದ್ದೇಶಿಸಲಾಗಿದೆ. ಈ ಅಧ್ಯಯನವನ್ನು ಶಿಕ್ಷಣ ಸಿದ್ಧಾಂತಿಯಾದ ಡಾ. ಸುಕುಮಾರ್ ಗೌಡ ರವರ ನೇತೃತ್ವದಲ್ಲಿ ನಡೆಯುತಿದ್ದು ಅಧ್ಯಯನದ ರೂಪುರೇಷೆಗಳನ್ನೊಳಗೊಂಡ ಯೋಜನೆಯನ್ನು ತಯಾರಿಸಲಾಗಿದ್ದು ಪ್ರಶ್ನಾವಳಿಯನ್ನು, ಅಂತಿಮಗೊಳಿಸಿ ಇಲಾಖಾ ಸಹಕಾರಕ್ಕಾಗಿ

ಇಲಾಖೆಯೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಾಯೋಗಿಕ ಅಧ್ಯಯನದ ಮುಖಾಂತರ ಪ್ರಶ್ನಾವಳಿಯನ್ನು ನಿಖರಗೊಳಿಸಿ ಪ್ರಮುಖ ಅಧ್ಯಯನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಯ್ದ ಶಾಲೆಗಳಲ್ಲಿ ನಡೆಸಲಾಗುವುದು.

**ಮಗು ಸ್ನೇಹಿ ಪರಿಕಲ್ಪನೆಯನ್ನು ವೃದ್ಧಿಸಲು ರಾಜ್ಯದ ಬೇರೆ ಬೇರೆ ಸಂಘಟನೆಗಳೊಂದಿಗೆ ರಾಜ್ಯಮಟ್ಟದ ಸಮಾವೇಶ**

ಮಗು ಸ್ನೇಹಿ ಶಾಲಾ ಮತ್ತು ಮಗು ಸ್ನೇಹಿಪಂಚಾಯತ್ ಪರಿಕಲ್ಪನೆಯನ್ನು ರಾಜ್ಯಮಟ್ಟದ ಸಂಘಟನೆಯೊಂದಿಗೆ ಪರಿಚಯಿಸಿ ಮತ್ತು ಅದನ್ನು ತಮ್ಮ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವಲ್ಲಿ ಒಂದು ದಿನದ ಕಾರ್ಯಾಗಾರವನ್ನು ಎನ್.ಜಿ.ಒ ಹಾಲ್ ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘ,



ಸಿ.ಸಿ.ಎಲ್, ಎಸ್.ಡಿ.ಎಂ.ಸಿ ಒಕ್ಕೂಟ, ಮಕ್ಕಳ ಒಕ್ಕೂಟ, ಎನ್.ಜಿ.ಒ ಒಕ್ಕೂಟ, ದಲಿತ ಸಂಘರ್ಷ ಸಮಿತಿ, ಸಿ.ಎ.ಸಿ.ಎಲ್.ಕೆ, ಎಸ.ಎಫ್.ಐ, ಬಿಸಿಯೂಟ ಸಂಘದ ಒಕ್ಕೂಟ, ಬಿ.ಜಿ.ವಿ.ಎಸ್, ಕೆ.ಜಿ.ವಿ.ಎಸ್, ಕೆ.ಆರ್.ವಿ.ಪಿ, ಮಹಿಳಾ ಸಂಚಲನಾ ಸಂಘಟನೆಯ ಪ್ರತಿನಿಧಿಗಳನ್ನೊಳಗೊಂಡ ರಾಜ್ಯದಲ್ಲಿ ಒಟ್ಟು 16 ಜಿಲ್ಲೆಯ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾಯಾಗಾರದ ಮುಂದಿನ ಅನುಸರಣೆಗಾಗಿ ಎಲ್ಲಾ ಜಿಲ್ಲೆಗಳಲ್ಲಿ ಆರ್.ಟಿ.ಇ ಸ್ಟಾಕ್ ಟೇಕಿಂಗ್ ಮಾಡುವುದು ಮತ್ತು ಇದರ ಜವಾಬ್ದಾರಿಗಳನ್ನು ಸಂಘಟನೆಗಳಿಗೆ ನೀಡಲಾಯಿತು.

**ತರಬೇತಿ ಕೈಪಿಡಿ ತಯಾರಿಕಾ ಕಾರ್ಯಾಗಾರ**



ಲಿಂಗತ್ವ ಮತ್ತು ಪೋಕ್ಸೋ-2012(ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ-2012) ತರಬೇತಿ ಕೈಪಿಡಿಯನ್ನು ರಚಿಸುವಲ್ಲಿ ಪರಿಣತ ತಂಡದೊಂದಿಗೆ ಎರಡು ದಿನದ ಕಾರ್ಯಾಗಾರವನ್ನು ಐ.ಎಸ್.ಡಿ ಹಾಲ್ ನಂತೂರು-ಮಂಗಳೂರು ಇಲ್ಲಿ ನಡೆಯಿತು. ಕೈಪಿಡಿ ರಚನೆಯಲ್ಲಿ ಪಡಿ ತಂಡ, ಚೈಲ್ಡ್ ಲೈನ್ ತಂಡ, ಡೀಡ್ಸ್ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮಂಗಳೂರು, ಪೋಲೀಸ್ ಇಲಾಖೆ ದ.ಕ, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕೈಪಿಡಿಗೆ ರೂಪುರೇಷೆಗಳನ್ನು ನೀಡಿ ಜವಾಬ್ದಾರಿಗಳನ್ನು ಹಂಚಲಾಯಿತು.

**ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ-ಯೋಜನೆ( 2014-17)ಯ ಬಗ್ಗೆ ಪಡಿ ಸಂಸ್ಥೆಯ**

**ಕಾರ್ಯಕರ್ತರಿಗೆ ತರಬೇತಿ ಕಾರ್ಯಾಗಾರ**



ಕಾರ್ಯಾಗಾರದಲ್ಲಿ ಸಮುದಾಯದ ಸಬಲೀಕರಣ, ಮಗುಸ್ನೇಹಿ ಶಾಲೆ, ಮಗುಸ್ನೇಹಿ ಪಂಚಾಯತ್, ಆರ್.ಟಿ.ಇ ಕೋಶ, ಮಾದರಿ ಸಮೂಹ ಸಂಪನ್ಮೂಲ ಕೇಂದ್ರ, ತರಗತಿಯೊಳಗಿನ ಕಲಿಕಾ ಮಟ್ಟದ ಅಧ್ಯಯನ, ರಾಜ್ಯ ಮಟ್ಟದ ಆರ್.ಟಿ.ಇ ಸ್ಟಾಕ್ ಟೇಕಿಂಗ್ ವಿಷಯದ ಬಗ್ಗೆ ಸವಿಸ್ತಾರವಾಗಿ ಪಡಿ ಸಂಸ್ಥೆಯ ನಿರ್ದೇಶಕರಾದ ರೆನ್ನಿ ಡಿ'ಸೋಜ ಇವರು ತರಬೇತಿಯನ್ನು ಐ.ಎಸ್.ಡಿ ಸಭಾಭವನ ನಂತೂರು ಇಲ್ಲಿ ನಡೆಸಿಕೊಟ್ಟರು.

**ಗುಣಾತ್ಮಕ ಶಿಕ್ಷಣಕ್ಕಾಗಿ ಮಗು ಸ್ನೇಹಿ ಸಮಾಜ ನಿರ್ಮಾಣದ ಯೋಜನೆಯಡಿಯಲಿ 2014-15 ರಲ್ಲಿ ಹೊರತರಲಾದ ಪರಿಕರಗಳು:**

**ಪೋಸ್ಟರ್ಸ್ :**

- ಮಕ್ಕಳ ಹಕ್ಕುಗಳ ಕ್ಲಬ್
- ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶಗಳು
- ಮಕ್ಕಳ ಗ್ರಾಮ ಸಭೆ

**ಕರಪತ್ರ:**

- ಮಕ್ಕಳ ಸ್ನೇಹಿ ಶಾಲೆ
- ಮಕ್ಕಳ ಪಂಚಾಯತ್
- ಮೀನಾ ತಂಡದ ಕರಪತ್ರ
- ಶಿಕ್ಷಣ ಹಕ್ಕುಗಳ ಕೋಶ
- ಪೋಕ್ಸೋ
- ಲಿಂಗತ್ವ ಸೂಚಕ ಪಟ್ಟಿ
- ಮಕ್ಕಳ ಸುರಕ್ಷಾ ಸಮಿತಿ ಪರಿಶೀಲನಾ ವೇಳಾಪಟ್ಟಿ
- ಮಕ್ಕಳ ಹಕ್ಕುಗಳ ಗ್ರಾಮ ಸಭೆ.

**ಜಿಲ್ಲಾ ಸಂಪನ್ಮೂಲ ಕೇಂದ್ರ ಉಡುಪಿ :**

ಶಿಕ್ಷಣ ಶಿಕ್ಷಕ ಸಪ್ತಾಹ 2014 ದ ಮಾಹಿತಿ ಕರಪತ್ರ